ಧಾರವಾಡ ನಗರದಲ್ಲಿ ಸೂಪರ್ ಮಾರ್ಕೆಟ್ ನಿರ್ಮಿಸುವ ಬಗ್ಗೆ

೭೬೮ ಶ್ರೀ ಚಂದ್ರಕಾಂತ ಬೆಲ್ಲದ್ (ಧಾರವಾಡ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಧಾರವಾಡ ನಗರ '' ಸೂಪರ್ ಮಾರ್ಕೆಟ್ '' ಕಟ್ಟಡ ಇಲ್ಲದೇ ಅನೇಕ ಚಿಕ್ಕಪುಟ್ಟ ವ್ಯಾಪಾರಿಗಾರರು ರಸ್ತೆಗಳ ಎರಡೂ ಬದಿಗಳಲ್ಲಿ ಅಂಗಡಿಗಳನ್ನು ಇಟ್ಟು ಕೊಂಡು ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ವ್ಯಾಪಾರಿಗಳ ಅಂಗಡಿಗಳಿಂದ ಮುಖ್ಯ ರಸೆ ಗಳಲ್ಲಿ ವಾಹನಗಳು ಬಂತ್ತು ಜನಗಳ ಓಡಾಟಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ ಈ ನಗರದಲ್ಲಿ ಸೂಪರ್ ಮಾರ್ಕೆಟ್ ಕಟ್ಟುವ ಯೋಜನೆ ಸರ್ಕಾರದ ಗಮನದಲ್ಲಿ ಇದೆಯೇ, ಹಾಗಾದರೆ ಎಂದು ಪ್ರಾರಂಭಿಸಲಾಗುವುದು;

ಈ) ಧಾರವಾಡ ನಗರವು ಅನೇಕ ಬಡಾವಣೆಗಳಿಂದ ಬೆಳೆದಿದ್ದು ಹೊಸ ಬಡಾವಣೆಗಳಲ್ಲಿ ಚಿಕ್ಕ ಮಾರ್ಕೆಟ್ಟುಗಳ ಕಟ್ಟಡಗಳನ್ನು ಕಟ್ಟಿಸುವ ಯೋಜನೆ ಸರ್ಕಾರದವರಿಗೆ ಇದೆಯೇ. ಹಾಗಿದ್ದಲ್ಲಿ ಯಾವ ಯಾವ ಬಡಾವಣೆಯಲ್ಲಿ ಬಜಾರ್‌ಗಳನ್ನು ನಿರ್ಮಿಸಲಾಗುವುದು ?

ಶ್ರೀ ಎಂ, ಚಂದ್ರ ಶೇಖರ್ (ನಗರಾಭಿವೃದ್ಧಿ ಸಚಿವರು).—

ಅ) ಬಂದಿದೆ.

ಆ) ಬಂದಿದೆ.

ಇ) ಹುಬ್ಬಳ್ಳಿ-ಧಾರವಾಡ ನಗರಗಳಲ್ಲಿ ರೂ. ೮೦.೦೦ ಲಕ್ಷ ಅಂದಾಜು ವೆಚ್ಚದ ವ್ಯಾಪಾರಿ ಹಾಗೂ ಕಛೇರಿ ಸಂಕೀರ್ಣಗಳನ್ನು ಕಟ್ಟಲು ಆಡಳಿತಾತ್ಮಕ ಮಂಜೂರಾತಿಯನ್ನು ಹಾಗೂ ಸರ್ಕಾರದ ಖಾತರಿಯನ್ನು ಸರ್ಕಾರದ ಆದೇಶ ಸಂಖ್ಯೆ, ಎಚ್‌ಯುಡಿ ೨೩ ಎಎಚ್‌ಡಿ ೮೬, ದಿನಾಂಕ ೧೯-೮-೧೯೮೭ರಲ್ಲಿ ನೀಡಲಾಗಿದೆ.

ಈ) ನಗರಪಾಲಿಕೆಯು ಕೆಳ ಕಾಣಿಸಿದ ಸ್ಥಳಗಳಲ್ಲಿ ಬಜಾರ್ ನಿರ್ಮಿಸಲು ಯೋಜನೆಗಳನ್ನು ಹಮ್ಮಿಕೊಂಡಿದೆ. —

೧ ಟ್ಯಾಂಕ್‌ಬಂಡ್ ರೋಡ್, ಸೂಪರ್ ಮಾರ್ಕೆಟ್, ಧಾರವಾಡ, ಬ್ಲಾಕ್-ಎ

೨ ಟ್ಯಾಂಕ್‌ಬಂಡ್ ರೋಡ್, ಸೂಪರ್ ಮಾರ್ಕೆಟ್, ಧಾರವಾಡ, ಬ್ಲಾಕ್-ಬಿ

೩ ಜನತಾ ಬಜಾರ್ ಹತ್ತಿರದ ನೆಹರು ಮಾರುಕಟ್ಟೆಯಲ್ಲಿ ' ಎ ' ಮತ್ತು ' ಬಿ ' ಬ್ಲಾಕ್‌ಗಳ ನಿರ್ಮಾಣ

ಟಿಬೆಟಿಯನ್ನರ ಪುನರ್ವಸತಿಯ ಬಗ್ಗೆ

೭೫೫ ಶ್ರೀ ಡಿ, ಎ, ಚಿನ್ನಪ್ಪ (ಮಂಡಿಕೇರಿ).—ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಟಿಬೇಟಿಯನ್ನರ ಸಂಖ್ಯೆ ಎಷ್ಟು,

ಆ) ರಾಜ್ಯದಲ್ಲಿ ಅವರಿಗಾಗಿ ಕೊಡಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು,

ಇ) ಸರ್ಕಾರದ ವತಿಯಿಂದ ಇವರಿಗೆ ಒದಗಿಸಲಾದ ಸೌಲಭ್ಯಗಳೇನು,

ಈ) ಈ ಬಗ್ಗೆ ಅವರಿಗಾಗಿ ಖರ್ಚಾದ ಒಟ್ಟು ಹಣ ಎಷ್ಟು,

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಮಂತ್ರಿಗಳು).—

ಅ) ೨೫,೬೦೪ ಟಿಬೆಟಿಯನ್ನರು ರಾಜ್ಯದಲ್ಲಿದ್ದಾರೆ